ಎಂ.ಎಸ್. ಶ್ರೀರಾಮ

# ದಾರಿಗಳು

**ಭಾಗ 1 ಮೊದಲು**

ಭಾರತದಿಂದ ಹಿಂದಿರುಗಿದಕೂಡಲೇ ಅಖ್ತರ್ ತನ್ನ ಜೀವನದಲ್ಲಿ ಕೆಲವು ಮೂಲಭೂತ ಬದಲಾವಣೆಗಳನ್ನು ಮಾಡಿಕೊಂಡಿದ್ದ. ಹಾಗೆ ನೋಡಿದರೆ ಅವನ ಜೀವನದಲ್ಲಿ ನಡೆದ ಒಂದೊಂದು ಮಹತ್ವದ ಘಟನೆಯೂ ಅವನು ಬದುಕುವ ರೀತಿಯನ್ನು ಮೂಲಭೂತ ರೀತಿಯಲ್ಲಿ ಬದಲಾಯಿಸಿತ್ತು. ಕಾಲೇಜಿನ ದಿನಗಳಲ್ಲಿ ಕುಶಾಲಿನಿಂದ ಇರುತ್ತಿದ್ದ – ಬಿಕಾಂ ಮತ್ತು ಸಿಎ ಮಾಡಿದ ನಂತರ ಆ ಓದಿಗೇ ಸಂಬಂಧವಿಲ್ಲದ – ಅವನ ತಂದೆ ನಡೆಸುತ್ತಿದ್ದ ಲಘು ಎಂಜಿನಿಯರಿಂಗ್ ಸಂಸ್ಥೆಯ ವ್ಯಾಪಾರವನ್ನು ಮುಂದುವರೆಸುವುದರಲ್ಲಿ ಒಂದು ವಿರೋಧಾಭಾಸವಿತ್ತು. ಅವನ ಓದಿಗೂ ವ್ಯಾಪಾರಕ್ಕೂ ಯಾವುದೇ ಸಂಬಂಧವಿರಲಿಲ್ಲ. ಅವನಿಗಿದ್ದ ಸಹಜವಾದ ಮನೋಧರ್ಮಕ್ಕೂ ಪರಿಣತಿಗೂ ಮತ್ತು ಬಳುವಳಿಯಾಗಿ ಬಂದ ವ್ಯಾಪಾರಕ್ಕೂ ಸಂಬಂಧವಿರಲಿಲ್ಲ. ಆದರೆ ಅವನು ಕೇವಲ ಈ ಸಂಸಾರದಲ್ಲಿ ಹುಟ್ಟಿದ್ದರಿಂದ ಈ ವ್ಯಾಪಾರವನ್ನು ಮುಂದುವರೆಸುವ ಅವಕಾಶ ಅವನದ್ದಾಗಿತ್ತು. ಅದು ಅವಕಾಶವೇ ಅಥವಾ ಅವನನ್ನು ಬೆಳೆಸಿದ ಹಿರಿಯರ ಬಗೆಗೆ ಸಲ್ಲಿಸುವ ಗೌರವ ಮತ್ತು ಜವಾಬ್ದಾರಿಯೇ ಎನ್ನುವುದನ್ನು ಅಖ್ತರ ಪ್ರಶ್ನಿಸಿಕೊಳ್ಳುತ್ತಿದ್ದ. ಹೀಗಾಗಿಯೇ ಅವನು ಮೊದಲಿನಿಂದಲೂ ಈ ವ್ಯಾಪಾರವನ್ನು ಮಾಲೀಕತ್ವದ ದೃಷ್ಟಿಯಿಂದ ನೋಡದೇ, ಅವನ ಮೇಲೆ ಯಾರೋ ಇಟ್ಟಿರುವ ನಂಬಿಕೆಯನ್ನು ನಿರ್ವಹಿಸುವವನ ಟ್ರಸ್ಟೀಷಿಪ್ ದೃಷ್ಟಿಯಿಂದ ನೋಡುತ್ತಿದ್ದ. ಅಖ್ತರ್ ಸತ್ಯ ಮತ್ತು ಸಹಿಷ್ಣುತೆ, ತರ್ಕದ ಜೊತೆಗೇ ದೈವಭಕ್ತಿ ಮತ್ತು ಆಧ್ಯಾತ್ಮಿಕತೆ, ವ್ಯಾಪಾರದ ಜೊತೆಗೆ ಮಾನವೀಯತೆ – ಹೀಗೆ ಅನೇಕ ವಿರೋಧಾಭಾಸವೆನ್ನಿಸುವಂತಹ ವಿಚಾರಗಳನ್ನು ಸುಲಲಿತವಾಗಿ ನಿಭಾಯಿಸಬಲ್ಲವನಾಗಿದ್ದ. ಯಾರಿಗೂ ತೊಂದರೆ ಕೊಡದೇ, ಧಕ್ಕೆಯುಂಟುಮಾಡದೇ, ನ್ಯಾಯಮಾರ್ಗದಲ್ಲಿ ವ್ಯಾಪಾರವನ್ನು ನಡೆಸುವುದೇ ಅವನ ಜೀವನ ಧರ್ಮವಾಗಿತ್ತು. ಹೀಗಾಗಿ ಅವನು ಎಂದೂ ಪೈಪೋಟಿಯಲ್ಲಿ, ವ್ಯಾಪಾರವನ್ನು ಬೆಳೆಸುವ ಮಾತನ್ನು ಆಡುತ್ತಲೇ ಇರಲಿಲ್ಲ. ಬದಲಿಗೆ ಅವನು ಉತ್ಕೃಷ್ಟತೆಯನ್ನು ಮತ್ತಷ್ಟು ಉತ್ತಮಪಡಿಸುವ ಮಾತನ್ನು ಮಾತ್ರ ಆಡುತ್ತಿದ್ದ. ತನ್ನ ಜೀವನ ಮಾರ್ಗವನ್ನು ಅಲ್ಲಾಹುವಿನ ಕೃಪೆಯೇ ನಿರ್ದೇಶಿಸುತ್ತಿದೆ ಎಂದುಕೊಂಡಿದ್ದ ಮತ್ತು ಆ ಮಾರ್ಗದಲ್ಲಿ ಅವನು ಮುಂದುವರೆಯುತ್ತಿದ್ದ.

ಕಳೆದ ಬಾರಿ ವ್ಯಾಪಾರದ ನಿಮಿತ್ತವಾಗಿ ಭಾರತಕ್ಕೆ ಹೋಗಿದ್ದ. ಆ ಪ್ರಯಾಣದ ಭಾಗವಾಗಿ ಅಹಮದಾಬಾದಿಗೆ ಹೋದಾಗ ಅವನ ಹೋಟೆಲಿಗೆ ಚೆಕಿನ್ ಆದ ಕೂಡಲೇ ನಡೆದ ತಪಾಸಣೆ ಮತ್ತು ಅಧಿಕಾರಿಗಳು ಒಂದು ಗಂಟೆಕಾಲ ನಿರಂತರವಾಗಿ ಅವನ ಪೂರ್ವಾಪರಗಳನ್ನು ಪ್ರಶ್ನಿಸಿದ್ದು – ಅವನ ಪೋಷಾಕು, ಧರ್ಮ, ನಂಬಿಕೆಗಳನ್ನೇ ಮೂಲವಾಗಿ ಇಟ್ಟುಕೊಂಡು ಅವನ ಮೇಲೆ ಅನುಮಾನ